# ಸಂತ ಫ್ರಾನ್ಸಿಸ್ ಶಾಲೆ

## ಪೋಷಕರಿಗಾಗಿ ಸಾಮಾನ್ಯ ಸುತ್ತೋಲೆ

## LKG - CLASS X

ಆತ್ಮೀಯ ಪೋಷಕರೆ, ಜೂನ್ 30, 2021

ಸಂತ ಫ್ರಾನ್ಸಿಸ್ ಶಾಲಾವತಿಯಿಂದ ನಿಮಗೆಲ್ಲಾ ಪ್ರೀತಿಯ ಸ್ವಾಗತ. ನೀವೆಲ್ಲರೂ ಸುರಕ್ಷಿತರಾಗಿದ್ದೀರಿ ಎಂದು ನಾವು ಭಾವಿಸಿರುತ್ತೇವೆ. ಪ್ರಸ್ತುತ ಸಾಲಿನ ಶೈಕ್ಷಣಿಕ ಅಧಿವೇಶನದ ಬಗ್ಗೆ ನಿಮಗೆ ಈಗಾಗಲೇ ತಿಳಿಸಲಾಗಿದೆ. ನಾವು ಸರ್ಕಾರದ ಮಾರ್ಗಸೂಚಿಗಾಗಿ ಕಾಯುತ್ತಿದ್ದ ಕಾರಣದಿಂದಾಗಿ ಒಂದರಿಂದ ನಾಲ್ಕನೆಯ ತರಗತಿಯ ಮಕ್ಕಳಿಗೆ ಆನ್‌ಲೈನ್ ತರಗತಿಗಳು ಪ್ರಾರಂಭವಾಗುವುದು ತಡವಾಗಿದೆ. ಈಗಾಗಲೇ ಒಂದರಿಂದ ನಾಲ್ಕನೆಯ ತರಗತಿಯ ಮಕ್ಕಳಿಗೆ ಐದು ದಿನಗಳ ಸಂವಾದನ್ಮಾಕ ಕಾರ್ಯಕ್ರಮ ಹಾಗೂ ಮೂರು ದಿನಗಳ ಸೇತುಬಂಧ ಕಾರ್ಯಕ್ರಮವನ್ನು ಆನ್‌ಲೈನ್ ಮೂಲಕ ನಡೆಸಲಾಗಿದೆ. ಒಂದರಿಂದ ನಾಲ್ಕನೆಯ ತರಗತಿಯ ಮಕ್ಕಳಿಗೆ ಜುಲೈ 1, 2021 ರಿಂದ ಹಾಗೂ ಎಲ್.ಕೆ.ಜಿ. ಮತ್ತು ಯು.ಕೆ.ಜಿ. ಮಕ್ಕಳಿಗೆ ಜುಲೈ 5, 2021 ರಿಂದ ನಿಯಮಿತ ಆನ್‌ಲೈನ್ ತರಗತಿಗಳು ನಡೆಯುತ್ತವೆ.

### 1. ಆನ್‌ಲೈನ್ ತರಗತಿಯಲ್ಲಿ ಮಕ್ಕಳ ಸಹಭಾಗಿತ್ವ

1.1 ಪಠ್ಯಪುಸ್ತಕ ಮತ್ತು ನೋಟ್‌ಬುಕ್‌ಗಳನ್ನು ಪಡೆದುಕೊಂಡಿರುವ ವಿದ್ಯಾರ್ಥಿಗಳನ್ನು ಹೊಸ ವಾಟ್ಸಾಪ್ ಗುಂಪಿಗೆ ಸೇರಿಸಲಾಗಿದೆ ಹಾಗೂ ಕಳೆದ ಸಾಲಿನ ಪಠ್ಯಪುಸ್ತಕಗಳನ್ನು ಬಳಸುವ ವಿದ್ಯಾರ್ಥಿಗಳು ಶಾಲಾ ಕಚೇರಿಗೆ ಮಾಹಿತಿ ತಿಳಿಸಿದ ನಂತರ ಅವರನ್ನು ಹೊಸ ವಾಟ್ಸಾಪ್ ಗುಂಪಿಗೆ ಸೇರಿಸಲಾಗಿದೆ. ಇನ್ನುಳಿದ ವಿದ್ಯಾರ್ಥಿಗಳನ್ನು ಹೊಸ ವಾಟ್ಸಾಪ್ ಗುಂಪಿಗೆ ಸೇರಿಸಲಾಗುವುದಿಲ್ಲ ಮತ್ತು ಅವರು ಆನ್‌ಲೈನ್ ತರಗತಿಗಳಿಗೆ ಹಾಜರಾಗಲು ಸಾಧ್ಯವಾಗುವುದಿಲ್ಲ ಕಾರಣ ವಿದ್ಯಾರ್ಥಿಗಳ ಬಳಿ ಪಠ್ಯಪುಸ್ತಕ ಇದೆ/ಇಲ್ಲ ಎಂಬ ಮಾಹಿತಿ ಶಾಲಾ ಕಚೇರಿಗೆ ದೊರಕಿರುವುದಿಲ್ಲ. ಆನ್‌ಲೈನ್ ತರಗತಿಯಲ್ಲಿ ಭಾಗವಹಿಸಲು ಇರುವ ಸರಿಯಾದ ಮಾನದಂಡ ವಿದ್ಯಾರ್ಥಿಗಳ ಬಳಿ ಪಠ್ಯಪುಸ್ತಕ ಮತ್ತು ನೋಟ್‌ಬುಕ್‌ಗಳು ಇರುತ್ತದೆಯೇ ಎಂಬುದೇ ಹೊರತು ಶಾಲಾ ಶುಲ್ಕದ ಬಾಕಿ ಮೊತ್ತದ ಮಾಹಿತಿಯಲ್ಲ.

1.2 ಎಲ್.ಕೆ.ಜಿ. ಮತ್ತು ಯು.ಕೆ.ಜಿ. ಮಕ್ಕಳಿಗೆ ಆನ್‌ಲೈನ್ ತರಗತಿಗಳು ಈಗಾಗಲೇ ನೀಡಿರುವ ವೇಳಾಪಟ್ಟಿಯ ಪ್ರಕಾರ ಜುಲೈ 05 2021 ರಿಂದ ಪ್ರಾರಂಭಗೊಳ್ಳುತ್ತವೆ. ಜುಲೈ 01 ಮತ್ತು ಜುಲೈ 02, 2021 ಎರಡು ದಿನಗಳ ಬೆಳಿಗ್ಗೆ 9–00 ರಿಂದ 9–40ರವರೆಗೆ ಸಂವಾದನ್ಮಾಕ ತರಗತಿಗಳು ನಡೆಯುತ್ತವೆ. ದಯಮಾಡಿ ಪೋಷಕರು ನಿಮ್ಮ ಮೊಬೈಲ್‌ನಲ್ಲಿ ಝೂಮ್ ಆ್ಯಪನ್ನು ಡೌನ್‌ಲೋಡ್ ಮಾಡಿಕೊಳ್ಳಬೇಕಾಗಿ ವಿನಂತಿ. ತರಗತಿ ಪ್ರಾರಂಭವಾಗುವ ಮುನ್ನ ಅಂದರೆ ಬೆಳಿಗ್ಗೆ 8–45 ಸಮಯಕ್ಕೆ ಸಂಬಂಧಿಸಿದ ಲಿಂಕನ್ನು ಕಳುಹಿಸಲಾಗುವುದು.

1.3 ಎಲ್.ಕೆ.ಜಿ. ಯಿಂದ ಹತ್ತನೆ ತರಗತಿಯವರೆಗೆ ಆನ್‌ಲೈನ್ ತರಗತಿಗಳು ಝೂಮ್ ಆ್ಯಪ್ ಮೂಲಕ ಮಾತ್ರ ನಡೆಯುತ್ತವೆ. ಎಲ್ಲಾ ತರಗತಿಗಳು ನಿಮಗೆ ತಲುಪಿರುವ ವೇಳಾಪಟ್ಟಿಯ ಪ್ರಕಾರ ನಿಗದಿತ ಸಮಯಕ್ಕೆ ನಡೆಯುತ್ತವೆ. ವೇಳಾಪಟ್ಟಿಯಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. ಯಾವುದೇ ಕಾರಣಕ್ಕೂ ತರಗತಿಯನ್ನು ತಪ್ಪಿಸದೆ ವಿದ್ಯಾರ್ಥಿಗಳು ಸರಿಯಾದ ಸಮಯಕ್ಕೆ ಆನ್‌ಲೈನ್ ತರಗತಿಗಳಿಗೆ ಹಾಜರಾಗಲು ವೇಳಾಪಟ್ಟಿಯು ಅವರಿಗೆ ಮಾರ್ಗಸೂಚಿಯಾಗಿದೆ.

### 2. ತರಗತಿಗಳ ವೇಳಾಪಟ್ಟಿ

| | ತರಗತಿ | ಒಟ್ಟು ಅವಧಿ | ಆರಂಭದ ಸಮಯ | ಮುಕ್ತಾಯದ ಸಮಯ |
|---|---|---|---|---|
| 1 | 1 ಮತ್ತು 2 | ಮೂರು | ಬೆಳಿಗ್ಗೆ 9–00 ರಿಂದ | ಬೆಳಿಗ್ಗೆ 11–20ರವರೆಗೆ |
| 2 | 3 ಮತ್ತು 8 | ನಾಲ್ಕು | ಬೆಳಿಗ್ಗೆ 9–00 ರಿಂದ | ಮಧ್ಯಾಹ್ನ 12–10ರವರೆಗೆ |
| 3 | 9 ಮತ್ತು 10 | ಐದು | ಬೆಳಿಗ್ಗೆ 9–00 ರಿಂದ | ಮಧ್ಯಾಹ್ನ 1–00ರವರೆಗೆ |

ಮನೆಯಲ್ಲಿ ಪೋಷಕರು ಮಕ್ಕಳಿಗೆ ವೇಳಾಪಟ್ಟಿಯನ್ನು, ತಾವು ತರಗತಿಯನ್ನು ಹಾಜರಾಗುವ ನಿರ್ದಿಷ್ಟ ಸ್ಥಳದಲ್ಲಿ ವೇಳಾಪಟ್ಟಿಯನ್ನು ಇಡುವಂತೆ ಅವರಿಗೆ ಮಾರ್ಗದರ್ಶನ ಮಾಡಬೇಕು. ಇದರಿಂದ ಮಕ್ಕಳು ಪ್ರತಿನಿತ್ಯ ಅದರ ಆಧಾರದ ಮೇಲೆ ಸರಿಯಾದ ಸಮಯಕ್ಕೆ ಯಾವುದೇ ರೀತಿಯ ಗೊಂದಲವಿಲ್ಲದೆ ಆನ್‌ಲೈನ್ ತರಗತಿಯಲ್ಲಿ ತೊಡಗಬಹುದು. ವೇಳಾಪಟ್ಟಿಯು ದೊರೆಯದಿದ್ದಲ್ಲಿ ಶಾಲಾ ಕಚೇರಿಗೆ ಪೋಷಕರು ಬಂದು ಪಡೆಯಬಹುದಾಗಿದೆ.

### 3. ತರಗತಿಗಳ ವಾಟ್ಸಾಪ್ ಗ್ರೂಪ್

3.1 ಪ್ರತಿಯೊಂದು ತರಗತಿಗಳ ಪ್ರತ್ಯೇಕ ವಾಟ್ಸಾಪ್ ಗುಂಪಿಗೆ ವೇಳಾಪಟ್ಟಿಯ ನಿಗದಿಯಂತೆ ಝೂಮ್ ಲಿಂಕನ್ನು ಕಳುಹಿಸಲಾಗುವುದು. ಆನ್‌ಲೈನ್ ತರಗತಿಗಳು ಮುಗಿದ ನಂತರ ವಿಷಯವಾರು ಶಿಕ್ಷಕರು ವಿಷಯಕ್ಕೆ ಸಂಬಂಧಿಸಿದ ನೋಟ್ಸ್ ಹಾಗೂ ಮನೆಗೆಲಸವನ್ನು ವಾಟ್ಸಾಪ್ ಗುಂಪಿಗೆ ಕಳುಹಿಸುವರು ಜೂಮ್ ಲಿಂಕ್ ಕೆಳಗಿನ ಮಾಹಿತಿಯನ್ನು ಒಳಗೊಂಡಿರುತ್ತದೆ.

(1) ಶಿಕ್ಷಕರ ಹೆಸರು (2) ವಿಷಯ (3) ದಿನಾಂಕ ಮತ್ತು ಸಮಯ (4) ಝೂಮ್ ಲಿಂಕ್ (5) ಮೀಟಿಂಗ್ ಐಡಿ (7) ಪಾಸ್ ಕೋಡ್ ಒಂದರಿಂದ ಹತ್ತನೆ ತರಗತಿಗಳಿಗೆ 2021 ಪಾಸ್‌ಕೋಡ್ ಆಗಿರುತ್ತದೆ, ಮೇಲಿನ ಎಲ್ಲಾ ಮಾಹಿತಿಗಳಿಂದಾಗಿ ವಿದ್ಯಾರ್ಥಿಗಳು ಯಾವುದೇ ಗೊಂದಲಗಳಿಲ್ಲದೆ ಆನ್‌ಲೈನ್ ತರಗತಿಗಳನ್ನು ಪ್ರವೇಶಿಸಬಹುದಾಗಿದೆ.

3.2 ಶಾಲೆಗಳು ಪ್ರಾರಂಭವಾಗುವವರೆವಿಗೂ ವಿದ್ಯಾರ್ಥಿಗಳೆಲ್ಲರೂ ಆನ್‌ಲೈನ್ ತರಗತಿಗಳಿಗೆ ಹಾಜರಾಗಬೇಕು. ತರಗತಿಯ ವರ್ಗಗಳು ಬೇರೆಯಾದರೂ ಶಿಕ್ಷಕರು ಕಳುಹಿಸಲಾಗುವ ಮಾಹಿತಿಗಳು ಒಂದೇ ರೀತಿಯಾಗಿ ಇರುತ್ತವೆ ಯಾವುದೇ ವ್ಯತ್ಯಾಸವಿರುವುದಿಲ್ಲ .

## 4. ನಿಯೋಜಿತ ಕಾರ್ಯ ಹಾಗೂ ಮಧ್ಯಂತರ ಪರೀಕ್ಷೆ

ಆವರ್ತಕ ಮೌಲ್ಯಮಾಪನ –1 ಆಗಸ್ಟ್ 04, 2021 ಪ್ರಾರಂಭವಾಗುವುದು ಮತ್ತು ಮಧ್ಯಂತರ ಪರೀಕ್ಷೆ ಸೆಪ್ಟೆಂಬರ್ 27 2021 ರಂದು ಪ್ರಾರಂಭವಾಗುವುದು ಸಂಬಂಧಿಸಿದ ವಿವರಗಳನ್ನು ಮುಂದಿನ ದಿನಗಳಲ್ಲಿ ಕಳುಹಿಸಲಾಗುವುದು.

## 5. ನೋಟ್‌ಬುಕ್‌ಗಳ ಸಲ್ಲಿಕೆ

ಆವರ್ತಕ ಮೌಲ್ಯಮಾಪನ ಮತ್ತು ಮಧ್ಯಂತರ ಪರೀಕ್ಷೆಯ ವೇಳಾಪಟ್ಟಿಯ ಪ್ರಕಾರ ಪೋಷಕರು ವಿಷಯವಾರು ನೋಟ್‌ಬುಕ್‌ಗಳನ್ನು ಶಾಲೆಗೆ ಸಲ್ಲಿಸಬೇಕು. ವಿಷಯಾಧಾರಿತ ಶಿಕ್ಷಕರು ನೋಟ್‌ಬುಕ್‌ಗಳನ್ನು ಪರೀಕ್ಷಿಸಿ ಅಂಕಗಳನ್ನು ನೀಡುವರ ಸಮಯಕ್ಕೆ ಸರಿಯಾಗಿ ಸಲ್ಲಿಸಿರುವುದನ್ನು ಆಧರಿಸಿ ಅಂಕಗಳನ್ನು ನೀಡಲಾಗುವುದು. ನೋಟ್‌ಬುಕ್‌ಗಳನ್ನು ಹಿಂಪಡೆಯುವ ಮಾಹಿತಿಯನ್ನು ನಂತರ ತಿಳಿಸಲಾಗುವುದು.

## 6. ಶಾಲೆಯ ಸಂಪರ್ಕ ಸಂಖ್ಯೆ

6.1. ಆರರಿಂದ ಹತ್ತನೆಯ ತರಗತಿಯವರಿಗೆ ಶಾಲೆಯ ಕಚೇರಿಯ ಸಂಪರ್ಕ ಸಂಖ್ಯೆ 9591799150 ಆಗಿರುತ್ತದೆ ಮತ್ತು ಒಂದರಿಂದ ಐದನೇ ತರಗತಿಯವರಿಗೆ ಶಾಲೆಯ ಕಛೇರಿಯ ಸಂಖ್ಯೆ 9972290186 ಆಗಿರುತ್ತದೆ. ಪುಸ್ತಕ ಸಾಲಿಗೆ ಸಂಬಂಧಿಸಿದ ಮಾಹಿತಿಯನ್ನು ಪಡೆಯಲು ಪೋಷಕರು ಶಾಲೆಯ ಸಂಪರ್ಕ ಸಂಖ್ಯೆಯನ್ನು ಕಡ್ಡಾಯವಾಗಿ ಹೊಂದಿರಬೇಕು. ಶಾಲೆಯ ಲ್ಯಾಂಡ್ ಲೈನ್ ನಂ. 0821 2970075. ಶಾಲೆಯ ಕಚೇರಿಯ ಸಮಯ ಬೆಳಿಗ್ಗೆ 8–30 ರಿಂದ ಮಧ್ಯಾಹ್ನ 1–00 ಗಂಟೆಯವರೆಗೆ ಸೋಮವಾರದಿಂದ ಶುಕ್ರವಾರದವರೆವಿಗೆ.

6.2. ಆರರಿಂದ ಹತ್ತನೆ ತರಗತಿಯವರೆಗೆ ಸಂಬಂಧಿಸಿದ ಮಾಹಿತಿಗಾಗಿ ನಮ್ಮ ಶಾಲೆಯ ಸಂತೋಷ್‌ಸರ್‌ರವರು ಪೋಷಕರೊಂದಿಗೆ ಸಂಪರ್ಕದಲ್ಲಿರುತ್ತಾರೆ. ಜೂಲಿಯಟ್ ಮೇಡಂರವರು ತರಗತಿ ಒಂದರಿಂದ ಐದನೆ ತರಗತಿಯವರೆಗೆ ಪೋಷಕರು ಮತ್ತು ಶಾಲಾ ಕಚೇರಿಯ ನಡುವೆ ಸಂಪರ್ಕದಲ್ಲಿರುತ್ತಾರೆ.

6.3. ವಿದ್ಯಾರ್ಥಿಗಳು ಆನ್‌ಲೈನ್ ತರಗತಿಗಳಿಗೆ ವಿಷಯವಾರು ಹಾಜರಾಗುತ್ತಿರುವ ಮಾಹಿತಿಯು ಶಾಲೆಯ ಕಛೇರಿಗೆ ವರದಿಯಾಗುತ್ತಿರಬೇಕು. ಶಿಕ್ಷಕರು ಆನ್‌ಲೈನ್ ತರಗತಿಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳ ಹಾಜರಾತಿಯನ್ನು ಶಾಲೆಯ ಕಛೇರಿಗೆ ತಿಳಿಸುವುದರಿಂದ ಸಂಬಂಧಿಸಿದ ಮಾಹಿತಿಯನ್ನು ಸಮಯಕ್ಕೆ ಸರಿಯಾಗಿ ಪೋಷಕರಿಗೆ ತಿಳಿಸಲಾಗುವುದು.

ಪೋಷಕರಿಗೆ ತಿಳಿಸಲಾಗುವ ಮಾಹಿತಿಗಳು : (1) ವಿಷಯವಾರು ತರಗತಿಗಳ ಹಾಜರಾತಿ (2) ನೋಟ್‌ಬುಕ್‌ಗಳ ಪೂರ್ಣತೆ (3) ಮನೆಗೆಲಸ (4) ನೋಟ್‌ಬುಕ್ ಹಾಗೂ ಉತ್ತರ ಪತ್ರಿಕೆಗಳ ಸಲ್ಲಿಕೆ. ವಾಟ್ಸಾಪ್ ಗುಂಪಿಗೆ ಕಳುಹಿಸಲಾಗುವ ಮಾಹಿತಿಯನ್ನು ಪೋಷಕರು ಆಗಿಂದಾಗ್ಗೆ ಪರೀಕ್ಷಿಸಬೇಕು.

## 7. ಶಾಲಾ ಕಚೇರಿಯೊಂದಿಗೆ ಪೋಷಕರ ಸಂಪರ್ಕ

7.1. ಶಾಲಾ ಕಚೇರಿಯು ಪ್ರತ್ಯೇಕವಾಗಿ ಸಮಯಕ್ಕೆ ಸರಿಯಾಗಿ ಪೋಷಕರ ಪ್ರಶ್ನೆಗಳು, ಸಲಹೆಗಳು, ಸಮಸ್ಯೆಗಳು, ಅಭ್ಯಾಸಕ್ಕೆ ಸಂಬಂಧಿಸಿದಂತೆ ಯಾವುದೇ ರೀತಿಯ ಗೊಂದಲಗಳನ್ನು ಸ್ವೀಕರಿಸಲು ಸದಾ ಸಿದ್ದವಿರುತ್ತದೆ. ಏಕೆಂದರೆ **"ಸಂತ ಫ್ರಾನ್ಸಿಸ್ ಶಾಲೆಯು ಪ್ರತಿಯೊಂದು ಮಗುವಿನ ಕಡೆ ಗಮನ ಹರಿಸುತ್ತದೆ."** ನಿಮ್ಮ ಮಗುವಿನ ಕಲಿಕೆಗೆ ಸಂಬಂಧಿಸಿದಂತೆ ಯಾವುದೇ ವಿಚಾರಕ್ಕಾಗಿ ಪೋಷಕರು ಶಾಲೆಯ ಕಚೇರಿಗೆ ಪೋನಿನ / ಸಂದೇಶದ ಮೂಲಕ ಇಲ್ಲವೆ ನೇರವಾಗಿ ಕಚೇರಿಗೆ ಬಂದು ವಿಚಾರಣೆ ನಡೆಸಬಹುದೆಂದು ತಮಗೆ ತಿಳಿಸುತ್ತೇನೆ.

7.2. ಸೋಮವಾರದಿಂದ ಶುಕ್ರವಾರದವರೆಗೆ ಶಾಲಾ ಕಛೇರಿಯ ಸಮಯದಲ್ಲಿ ಪೋಷಕರು ಬಂದು ಸಹೋದರ ಸನಿಲ್ ತರಾಯಿಲ್‌ರವರನ್ನು ಭೇಟಿಯಾಗಬಹುದು. ನಾನು ಅಂದರೆ ಸಹೋದರ ಸನಿಲ್ ತರಾಯಿಲ್ ನಿಮ್ಮ ಸಮಸ್ಯೆ, ಸಲಹೆ, ಕಾಳಜಿಗಳಿಗೆ ಸ್ಪಂಧಿಸುತ್ತೇನೆ. **"ಸೇಂಟ್ ಫ್ರಾನ್ಸಿಸ್ ಶಾಲೆಯು ಪ್ರತಿಯೊಂದು ಮಗುವಿನ ಪ್ರತಿ ಹೆಜ್ಜೆಯೊಂದಿಗೆ ನಡೆಯುತ್ತದೆ"**. ಪ್ರಸ್ತುತ ಸಮಯದಲ್ಲಿ ಎಲ್ಲರೂ ಕಠಿಣ ಪರಿಸ್ಥಿತಿಯನ್ನು ಎದುರಿಸುವಂತಾಗಿ ತರಗತಿಗಳನ್ನು ನಿರ್ಲಕ್ಷಿಸುವ ಸಾಧ್ಯತೆಗಳು ಇರುತ್ತವೆ.

7.3. ಶಾಲಾ ಶುಲಕ್ಕೆ ಸಂಬಂಧಿಸಿದಂತೆ ನೀವು ವಿಳಂಬ ಮಾಡುವಂತೆ ದಯಮಾಡಿ ನಿಮ್ಮ ಮಗುವಿನ ವಿದ್ಯಾಭ್ಯಾಸಕ್ಕೆ ಸಂಬಂಧಿಸಿದಂತೆ ಕಳುಹಿಸಲಾಗುವ ಮಾಹಿತಿಯನ್ನು ಯಾವುದೇ ಕಾರಣಕ್ಕೂ ನಿರ್ಲಕ್ಷಿಸಬೇಡಿ. ನಾನು ನಿಮಗೆ ಹೇಳುವುದೇನೆಂದರೆ **"ಸಮಯಕ್ಕೆ ಸರಿಯಾದ ಸಂವಹನ ಹಾಗೂ "ಜವಾಬ್ದಾರಿಯುತ ಶಾಲೆಯೊಂದಿಗಿನ ಸಂಬಂಧ"** ಪರಿಸ್ಥಿತಿಯನ್ನು ಪೋಷಕರು ಅರ್ಥಮಾಡಿಕೊಳ್ಳಬೇಕು. ನಾನು ಪ್ರತಿಯೊಬ್ಬ ಮಗುವಿನ ಮನೆಗೆ ಬರುವುದು ಸಾಧ್ಯವಾಗದು. ಹಾಗಾಗಿ ತಾವುಗಳು ಶಾಲೆಗೆ ಬಂದು ನಿಮ್ಮ ಮಗುವಿನ ಕಲಿಕೆಯನ್ನು ತಿಳಿಸಬೇಕು. ಇಂತಹ ಪರಿಸ್ಥಿತಿಯಲ್ಲಿ ಶಾಲೆಯು ಮಕ್ಕಳ ಕಲಿಕೆಗಾಗಿ/ಪ್ರಗತಿಗಾಗಿ ತುಂಬಾ ಶ್ರಮಿಸುತ್ತಿದೆ. ಇಂತಹ ಸಮಯದಲ್ಲಿ ಶಾಲೆಯು ಪೋಷಕರಿಂದ ಬಯಸುವುದು ಸಮಯಕ್ಕೆ ಸರಿಯಾದ ಸಂವಹನ ಹಾಗೂ ಶಾಲಾ ಕಛೇರಿಯೊಂದಿಗೆ ನಿಕಟ ಸಂಬಂಧ.

## 8. ಮೊಬೈಲ್ ಬಳಕೆಯ ಉಪಯೋಗ ಮತ್ತು ದುರುಪಯೋಗ

8.1. ಶಾಲೆಯು ಆನ್‌ಲೈನ್ ತರಗತಿಗಳನ್ನು ನಡೆಸುತ್ತಿರುವುದರ ಬಗ್ಗೆ ಪೋಷಕರಿಗೆ ಹತಾಶೆ ಹಾಗೂ ಬೇಸರದ ಮನೋಭಾವ ಮೂಡುವುದು ಬೇಡ. ಆನ್‌ಲೈನ್ ತರಗತಿಗಳಲ್ಲಿ ಪಾಲ್ಗೊಳ್ಳುವುದು ಮಕ್ಕಳು ಕಡ್ಡಾಯವಾಗಿದೆ. ಒಂದು ಕಡೆ ಕೆಲವು ಪೋಷಕರಿಗೆ ಇದು ಹೊರೆಯೂ ಸಹ ಆಗಿದೆ. ಆದರೆ ಈ ಕಠಿಣ ಪರಿಸ್ಥಿತಿಯಿಂದಾಗಿ ಬೇರೆ ಯಾವುದೇ ರೀತಿಯ ಬದಲಿ ವ್ಯವಸ್ಥೆ ಮಕ್ಕಳ ಕಲಿಕೆಗೆ ಇಲ್ಲವಾಗಿರುವುದರಿಂದ ಇದು ಅನಿವಾರ್ಯವೂ ಸಹ ಆಗಿದೆ. ದಯಮಾಡಿ ಪೋಷಕರು ಈ ನಿಟ್ಟಿನಲ್ಲಿ ಅರ್ಥ ಮಾಡಿಕೊಂಡು ಸಹಕರಿಸಬೇಕಾಗಿದೆ.

8.2. ನನ್ನ ಶಾಲೆಯ ಮಕ್ಕಳಲ್ಲಿ ನನ್ನ ಪ್ರಾರ್ಥನೆ ಏನೆಂದರೆ ಕಲಿಕೆಗಾಗಿ ಮೊಬೈಲ್ ಬಳಕೆಯನ್ನು ಮಾಡಬೇಕೇ ಹೊರತು ಅದಕ್ಕೆ ಬಲಿಯಾಗುವುದು ಬೇಡ. ಆನ್‌ಲೈನ್ ತರಗತಿಗಳು ನಡೆಯುವ ಸಂದರ್ಭದಲ್ಲಿ ಮೊಬೈಲ್ ಬಳಸುವಂತೆ ಪೋಷಕರು ಮಕ್ಕಳಿಗೆ ತಿಳಿಸಬೇಕು. ಮಕ್ಕಳು ಕೇಳಿದಾಗಲೆಲ್ಲ ಮೊಬೈಲ್ ಕೊಡುವುದನ್ನು ತಪ್ಪಿಸಿ ಅದರ ಬಳಕೆಯಿಂದ ಆದಷ್ಟು ಮಕ್ಕಳನ್ನು ದೂರವಿರಿಸಬೇಕು.

8.3. ಶಾಲೆಯು ಮೊಬೈಲ್ ಬಳಕೆಗೆ ಸಂಬಂಧಿಸಿದಂತೆ ಎಲ್ಲಾ ತರಗತಿಯ ಮಕ್ಕಳಿಗೂ ಸೆಮಿನಾರ್‌ನ್ನು ಆಯೋಜಿಸಲಾಗುವುದು. ಅದಕ್ಕೆ ಸಂಬಂಧಿಸಿದ ಸಮಯವನ್ನು ಮುಂಚಿತವಾಗಿ ನಿಮ್ಮ ಗಮನಕ್ಕೆ ತರಲಾಗುವುದು. ಮಕ್ಕಳ ಹಿತದೃಷ್ಟಿಯಿಂದ ಈ ಪ್ರಯತ್ನವನ್ನು ಮಾಡಲಾಗುವುದು.

## 9. ಶೈಕ್ಷಣಿಕ ವರ್ಷದ ಶಾಲಾ ಶುಲ್ಕದ ಮಾಹಿತಿ 2021–22

9.1 ಪ್ರತಿವರ್ಷ ಶಾಲಾಶುಲ್ಕದ ಮೊದಲ ಕಂತನ್ನು ಪಾವತಿಸಿದ ನಂತರ ಪಠ್ಯಪುಸ್ತಕ ಹಾಗೂ ನೋಟ್‌ಬುಕ್‌ಗಳನ್ನು ವಿತರಿಸಲಾಗುತ್ತದೆ. ಆದರೆ ಹಿಂದಿನ ವರ್ಷ ಹಾಗೂ ಪ್ರಸ್ತುತ ವರ್ಷ ಪರಿಸ್ಥಿತಿಯನ್ನು ಅರ್ಥೈಸಿಕೊಂಡು ಶಾಲೆಯು ಪೋಷಕರ ಹಣಕಾಸಿನ (ಆರ್ಥಿಕ) ಮಟ್ಟವನ್ನು ಗಮನದಲ್ಲಿಸಿರಿಕೊಂಡು ಶುಲ್ಕದ ವಿಷಯದಲ್ಲಿ ಸಡಿಲಿಕೆಯನ್ನು ಮಾಡಿದೆ.

9.2 ನಮ್ಮ ಶಾಲೆಗೆ ಮಗುವಿಗೆ ಉತ್ತಮ ಗುಣಮಟ್ಟದ ಶಿಕ್ಷಣ ನೀಡುವುದು ಮೊದಲ ಆದ್ಯತೆ ಆಗಿದೆ. ಶಾಲಾ ಶುಲ್ಕಕ್ಕೆ ಸಂಬಂಧಿಸಿದಂತೆ ಪರಿಸ್ಥಿತಿಯನ್ನು ಗಮನದಲ್ಲಿರಿಸಿ ಸರ್ಕಾರದ ಮಾರ್ಗದರ್ಶನದಂತೆ ಶುಲ್ಕದ ವಿಚಾರದಲ್ಲಿ ಸಡಲಿಕೆಯನ್ನು ಹಿಂದಿನ ವರ್ಷವೂ ಮಾಡಲಾಗಿದೆ. ಈ ವರ್ಷದಲ್ಲಿಯೂ ಅನ್‌ಲೈನ್ ತರಗತಿಗಳನ್ನು ನಡೆಸಲಾಗುತ್ತಿದ್ದು. ಸರ್ಕಾರದ ಮಾರ್ಗದರ್ಶನದಂತೆ ಸಡಿಲಿಕೆಯನ್ನು ತರಲಾಗುವುದು.

9.3 ಆನ್‌ಲೈನ್ ತರಗತಿಗಳು ನಡೆಯುತ್ತಿರುವುದನ್ನು ಗಮನದಲ್ಲಿರಿಸಿಕೊಂಡು ಒಂದನೇ ತರಗತಿಯಿಂದ ಐದನೇ ತರಗತಿಯವರೆಗೆ ಶಾಲಾ ಶುಲ್ಕದ ಶೇಕಡ 50% ರಷ್ಟನ್ನು, ಆರನೇ ತರಗತಿಯಿಂದ ಎಂಟನೇ ತರಗತಿಯವರೆಗೆ ಶಾಲಾ ಶುಲ್ಕದ 35%ರಷ್ಟನ್ನು ಕಡಿತಗೊಳಿಸಲಾಗಿದೆ. ಪೋಷಕರು ತಾವು ಶಾಲಾ ಶುಲ್ಕವನ್ನು ನಮ್ಮ ಶಾಲೆಯ ಸೌತ್ ಇಂಡಿಯನ್ ಬ್ಯಾಂಕ್ ಮೂಲಕ ಪಾವತಿಸಿದ ನಂತರ ರಸೀದಿಯನ್ನು ಪಡೆಯಬೇಕಾಗಿದೆ. ರಸೀದಿಯು ನೀವು ಶುಲ್ಕವನ್ನು ಪಾವತಿಸಿರುವುದಕ್ಕೆ ಒಂದು ಆಧಾರವಾಗಿರುತ್ತದೆ.

9.4 ಪೋಷಕರು ದಯಮಾಡಿ ಶಾಲಾ ಕಚೇರಿಯಲ್ಲಿ ಪ್ರಸ್ತುತ ವರ್ಷದ 2021–22 ಶಾಲಾ ಶುಲ್ಕದ ಚಲನ್‌ಬುಕ್ಕನ್ನು ಪಡೆಯಬೇಕಾಗಿ ಕೇಳಿಕೊಳ್ಳುತ್ತೇನೆ. ಚಲನ್ ಬುಕ್‌ನಲ್ಲಿ ತಾವು ಪಾವತಿಸಬೇಕಾದ ಶುಲ್ಕದ ವಿವರ ಇರುತ್ತದೆ. ಒಮ್ಮೆ ಪಾವತಿಸಿದ ನಂತರ ಪೋಷಕರು ಚಲನ್‌ಬುಕನ್ನು ಶಾಲಾ ಕಚೇರಿಗೆ ತಂದು ಕಚೇರಿಯಲ್ಲಿ ಶಾಲೆಯ ಶುಲ್ಕ ಕಡಿತದ ಮುದ್ರೆಯನ್ನು ದಿನಾಂಕದೊಂದಿಗೆ ಪಡೆದುಕೊಳ್ಳಬೇಕು.

## 10. ಆನ್‌ಲೈನ್ ತರಗತಿಗೆ ಹಾಜರಾತಿ ಕಡ್ಡಾಯ

ಎಲ್ಲರಿಗೂ ತಿಳಿದಿರುವ ಹಾಗೆ ನಿಯಮಿತ ತರಗತಿಯಂತೆ ಆನ್‌ಲೈನ್ ತರಗತಿಯು ಒಂದೇ ರೀತಿಯಲ್ಲಿ ಇರುವುದಿಲ್ಲ. ಆದರೆ ನಮಗೆಲ್ಲಾ ತಿಳಿದಿರುವ ಹಾಗೆ ಬೇರೆ ರೀತಿಯ ಬದಲಾವಣೆ ಈ ಸಂದರ್ಭದಲ್ಲಿ ಸಾಧ್ಯವಿಲ್ಲದ ಕಾರಣ ದಯವಿಟ್ಟು ಯಾವುದೇ ರೀತಿಯ ಕಾರಣಗಳಿಂದಾಗಿ ಮಕ್ಕಳು ಆನ್‌ಲೈನ್ ತರಗತಿಯಿಂದ ಹೊರಗುಳಿಯುವಂತಿಲ್ಲ. ಯಾವುದೇ ವಿದ್ಯಾರ್ಥಿಯು ಒಂದು ದಿನ ತರಗತಿಗೆ ಹಾಜರಾಗಲಿಲ್ಲ ಎಂದರೆ ಆ ವಿದ್ಯಾರ್ಥಿಗೆ ಮುಂದಿನ ತರಗತಿಯಲ್ಲಿ ನಡೆಯುವ ವಿಷಯದ ಬಗ್ಗೆ ತಿಳಿಯುವುದಿಲ್ಲ. ಆದ್ದರಿಂದ ಎಲ್ಲ ವಿದ್ಯಾರ್ಥಿಗಳು ಆನ್‌ಲೈನ್ ತರಗತಿಗಳಿಗೆ ತಪ್ಪದೆ ಹಾಜರಾಗಬೇಕು. ಹಾಜರಾಗದಿದ್ದಲ್ಲಿ ಮುಂದಿನ ತರಗತಿಯಲ್ಲಿ ಸಮಸ್ಯೆಯನ್ನು ಎದುರಿಸಬೇಕಾಗುತ್ತದೆ.

## 11. ಪೋಷಕರ ಪಾತ್ರ

ಪ್ರತಿಯೊಂದು ಮಗುವೂ ಈ ಸಂದರ್ಭದಲ್ಲಿ ತಮಗೆ ತಾವೇ ಶಿಕ್ಷಕರು ಹಾಗೆಯೇ ಪ್ರತಿಯೊಬ್ಬ ಪೋಷಕರೂ ತಮ್ಮ ಮಕ್ಕಳಿಗೆ ತಾವೇ ಶಿಕ್ಷಕರು. ಶಾಲೆಯೊಂದೇ ಕಲಿಕೆಗೆ ಇರುವ ಸ್ಥಳವಲ್ಲ. ನಾಣ್ನುಡಿಯಂತೆ **"ಮನೆಯೇ ಮೊದಲ ಪಾಠ ಶಾಲೆ ಹಾಗೆಯೇ ಪೋಷಕರೇ ಅವರ ಗುರುಗಳು".** ಈ ಕೋವಿಡ್ ಪರಿಸ್ಥಿತಿಯಿಂದಾಗಿ ಕಲಿಕೆಯ ದೃಷ್ಟಿಯಿಂದಾಗಿ ಮಕ್ಕಳ ಮತ್ತು ಪೋಷಕರ ಪಾತ್ರ ಎಷ್ಟು ಮುಖ್ಯವಾಗಿದೆ ಎಂಬುದು ಎಲ್ಲರಿಗೂ ಅರ್ಥವಾಗಿದೆ. ಯಾವ ಮಕ್ಕಳಿಗೆ ಪ್ರಸ್ತುತ ಪರಿಸ್ಥಿತಿ ಹಾಗೂ ನಾಳಿನ ಯೋಚನೆ ಇರುತ್ತದೆಯೋ ಅವರು ಸ್ವತಃ ತಾವೇ ಉತ್ತಮ ಶಿಸ್ತನ್ನು ರೂಢಿಸಿಕೊಂಡು ತಮ್ಮ ವಿದ್ಯಾಭ್ಯಾಸದ ಕಡೆಗೆ ಗಮನ ನೀಡಿ ಮುಂದೆ ಬರುವರು. ಇಂತಹ ಸಂದರ್ಭಗಳಲ್ಲಿ ಯಾವ ಪೋಷಕರು ತಮ್ಮ ಮಕ್ಕಳ ಶಿಕ್ಷಣದ ಕಡೆಗೆ ಗಮನ ನೀಡುವುದಿಲ್ಲ ಅವರಿಗೆ ಮುಂದಿನ ದಿನಗಳಲ್ಲಿ ಎದುರಾಗುವ ಕಠಿಣ ಸಮಸ್ಯೆಗಳಿಂದ ತಪ್ಪಿನ ಅರಿವಾಗುವುದು. ಆದ್ದರಿಂದ ಪ್ರತಿಯೊಬ್ಬ ಪೋಷಕರು ತಮ್ಮ ಮಕ್ಕಳ ಶಿಕ್ಷಣದ ಕಡೆಗೆ ಹೆಚ್ಚು ಗಮನ ನೀಡಿ ತಾವು ಸಹಕಾರವನ್ನು ನೀಡಬೇಕು.

### 12. ದೇವರ ಉಪಸ್ಥಿತಿಗಾಗಿ ಒಟ್ಟಾಗಿ ಪ್ರಾರ್ಥಿಸೋಣ

ನಾವೆಲ್ಲರೂ ನಮ್ಮ ಜೀವನದಲ್ಲಿ ದೇವರ ನಿರಂತರ ಇರುವಿಕೆಯನ್ನು ಹೊಂದಬೇಕೆಂದು ನಾನು ಬಯಸುತ್ತೇನೆ. ಕಠಿಣ ಪರಿಸ್ಥಿತಿಯನ್ನು ಎದುರಿಸುವ ಸಮಯದಲ್ಲಿ ದೇವರು ನಮಗೆ ನಮ್ಮ ತಂದೆ, ತಾಯಿ, ಅಣ್ಣ, ತಮ್ಮ, ಸಹೋದರ, ಸಹೋದರಿ, ಮಗು, ಹೆಂಡತಿ, ಪತಿ ಹಾಗೂ ಸ್ನೇಹಿತರ ಮೂಲಕ ಸಮಾಧಾನವನ್ನು ನೀಡಿರಬಹುದು.

ಎಲ್ಲರಿಗೂ ಒಂದಲ್ಲ ಒಂದು ರೀತಿಯಲ್ಲಿ ಹಲವು ತೊಂದರೆಗಳು ಉಂಟಾಗಿವೆ ಅಂತಹ ಸಂದರ್ಭಗಳಲ್ಲಿ ನಮ್ಮನ್ನು ಧೈರ್ಯಶಾಲಿಗಳನ್ನಾಗಿ ಮಾಡಿ ಪರಿಸ್ಥಿತಿಯನ್ನು ನಿಭಾಯಿಸುವ ಶಕ್ತಿಯನ್ನು ದೇವರು ನೀಡಿರುತ್ತಾನೆ. ನಾವು ಕಷ್ಟದ ಸಮಯವನ್ನು ಎದುರಿಸುವಾಗ ಏಕಾಂಗಿಯಾಗಿರುವುದಿಲ್ಲ, ನಮ್ಮ ಜೊತೆಯಲ್ಲಿ ಭಗವಂತ ಇರುತ್ತಾನೆ ಎಂಬ ನಂಬಿಕೆಯ ಮೇಲೆ ನಡೆಯಬೇಕು.

ನಿಮಗೆ ಹಾಗೂ ನಿಮ್ಮ ಕುಟುಂಬದವರಿಗೆಲ್ಲಾ ದೇವರು ಒಳ್ಳೆಯ ಆರೋಗ್ಯ ಹಾಗೂ ರಕ್ಷಣೆಯನ್ನು ನೀಡಲಿ ಎಂದು ನಾನು ಪ್ರಾರ್ಥಿಸಿಕೊಳ್ಳುತ್ತೇನೆ. ಹಾಗೆಯೇ ನಾನು ಯಾವಾಗಲೂ ನಿಮ್ಮ ನಿರಂತರ ಬೆಂಬಲ ಹಾಗೂ ಪ್ರೋತ್ಸಾಹವನ್ನು ಎದುರು ನೋಡುತ್ತೇನೆ. ಎಲ್ಲರಿಗೂ ಭಗವಂತ ಶಾಂತಿ ಹಾಗೂ ನೆಮ್ಮದಿಯನ್ನು ನೀಡಲಿ!

**ಸಹೋದರ ಸನಿಲ್ ತರಾಯಿಲ್**
ಪ್ರಾಂಶುಪಾಲರು

All **WE** are saying is
**GIVE PEACE a chance**
**in your FAMILY**